ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರಃ 2059/2012

ಚಾಸಾ-2 ಪ್ರಾಸಾಃ1

ದಿನಾಂಕಃ 04.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಸುರೇಶ್ |
| ತಂದೆಯ ಹೆಸರು | : | ನಾರಾಯಣ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ತಲ್ಲೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಚಾಸಾ-1ರವರ ಪರಿಚಯವಿದೆ. ಆರೋಪಿತರನ್ನು ನೋಡಿರುವುದಿಲ್ಲ. ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿ ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಕಲ್ಲನ್ನು ತೋರಿಸಿದ್ದು ಅದನ್ನು ನೋಡಿ ಗುರುತಿಸಿಲ್ಲ. ಅದನ್ನು ಮುಮಾ1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 05-05-2012 ರಂದು ನಾನು ತಲ್ಲೂರಿನಿಂದ ಮನೆಗೆ ಹೋಗುವಾಗ ಚಾಸಾ-1ರವರೊಂದಿಗೆ ರಿಕ್ಷಾದಲ್ಲಿ ಹೋಗಿದ್ದು, ನಾವು ತಲ್ಲೂರಿನಿಂದ ಕೋಟೆ ಬಾಗಿಲಿಗೆ ಹೋಗುತ್ತಿದ್ದಾಗ ನಮ್ಮ ಹಿಂದಿನಿಂದ ಒಂದು ರಿಕ್ಷಾ ಬರುತ್ತಿದ್ದು ನಾವು ಕೋಟೆ ಬಾಗಿಲಿನಲ್ಲಿ ರಿಕ್ಷಾದವನಿಗೆ ಹಣ ನೀಡಿ ರಿಕ್ಷಾ ದಿಂದ ಇಳಿದಿರುತ್ತೇವೆ ಎಂದರೆ ಸರಿ. ನಾವು ಹೋಗುತ್ತಿದ್ದಾಗ ರಾತ್ರಿ 11-30 ಗಂಟೆಗೆ ಆರೋಪಿತರು ನನ್ನ ಜೊತೆ ಇದ್ದ ಚಾಸಾ-1ರವರನ್ನು ಅಡ್ಡಗಟ್ಟಿ ತಲ್ಲೂರಿನಲ್ಲಿ ನಿಮಗೆ ಮಾತನಾಡಲು ನಿಲ್ಲಿಲು ಹೇಳಿದ್ದೆ, ಯಾಕೆ ನಿಲ್ಲಲಿಲ್ಲ ಬೋಳಿಮಗನೇ ಎಂದು ದೂಡಿಹಾಕಿ ಕೈಯಿಂದ ಹೊಡೆದು ಅಲ್ಲೇ ಇದ್ದ ಕಲ್ಲಿನಿಂದ ಆರೋಪಿ ಸುನೀಲ್ ಚಾಸಾ-1ರವರ ಎಡಕಾಲು ಮತ್ತು ಗಲ್ಲಕ್ಕೆ ಗುದ್ದಿದ್ದು, ಆಗ ನಾನು ಮತ್ತು ಚಾಸಾ-

1ರವರು ಬೊಬ್ಬೆ ಹಾಕಿದ್ದು, ನೆರೆಮನೆಯವರು ಓಡಿ ಬಂದಾಗ ಅವರನ್ನು ನೋಡಿ ಆರೋಪಿತರು ಓಡಿ ಹೋಗಿರುತ್ತಾರೆ ಎಂದರೆ ಸಾಕ್ಷಿಯು ನಾನು ಅಟೋದಿಂದ ಇಳಿದ ತಕ್ಷಣ ಮನೆಗೆ ಹೋಗಿರುತ್ತೇನೆ ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ದಿಃ 07-05-2012 ರಂದು ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ--3 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ನಿಪಿ-1 ರಂತೆ ಮಹಜರು ಮಾಡಿ ಆರೋಪಿತರು ಹಲ್ಲೆಗೆ ಬಳಸಿದ ಕಲ್ಲನ್ನು ವಶಪಡಿಸಿಕೊಂಡು ಸದ್ರಿ ಮಹಜರನ್ನು ನನಗೆ ಓದಿ ತಿಳಿಸಿ ಸ್ಥಳದಲ್ಲಿಯೇ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ತೋರಿಸಿ ಇದರಿಂದಲೇ ಚಾಸಾ-1ರವರಿಗೆ ಹೊಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ